ಸೀಮೆಎಣ್ಣೆ ಹಾಕರುಗಳಿಂದ ಪಡಿತರ ಚೀಟಿದಾರರಿಗೆ ಮೋಸ

1270 (1819): ಶ್ರೀ ಆರ್. ದಯಾನಂದ ರಾವ್ (ಗಾಂಧಿನಗರ):–

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಸೀಮೆಎಣ್ಣೆ ಹಾಕರುಗಳು ಸೀಮೆಎಣ್ಣೆ ಅಳತೆ ಮಾಡುವಾಗ ಪಡಿತರ ಚೀಟಿದಾರರಿಗೆ ಮೋಸ ಮಾಡುತ್ತಿರುವುದು ಹಾಗೂ ಕಲಬೆರಕೆ ಮತ್ತು ಇತರ ಅವ್ಯವಹಾರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಬೆಂಗಳೂರು ನಗರದಲ್ಲಿ ಕರ್ನಾಟಕ ಹಾಲು ಮಹಾ ನಿಗಮವು ವ್ಯವಸ್ಥೆ ಮಾಡಿದಂತೆ ಸೀಮೆಎಣ್ಣೆಯ ವಿತರಣೆಗಾಗಿ ಸಗಟು ವಿತರಣಾ ಬೂತುಗಳನ್ನು ಸ್ಥಾಪಿಸುವ ಪ್ರಸ್ತಾವನೆ ಏನಾದರೂ ಇದೆಯೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ. ಹೌದು.

ಆ. ಹೌದು. ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು 5 ಸೀಮೆಎಣ್ಣೆ ಚಿಲ್ಲರೆ ಮಾರಾಟ ಕೇಂದ್ರಗಳನ್ನು ತೆರೆದಿದೆ. ಸೀಮೆಎಣ್ಣೆ ಪೊಟ್ಟಣಗಳನ್ನು ಮಾಡಿ ವಿತರಿಸುವ ಯೋಜನೆಯನ್ನು ಸರ್ಕಾರ ಪರಿಶೀಲಿಸಿತು. ಆದರೆ ಸೀಮೆಎಣ್ಣೆ ಜ್ವಲನಶೀಲತೆ ಹೊಂದಿರುವುದರಿಂದ ಬೆಂಕಿ ಅನಾಹುತ ಹೊಂದುವ ಅಪಾಯವಿದೆ ಎಂಬ ಅಭಿಪ್ರಾಯ ಹೊಂದಿದೆ.

ಬೆಂಗಳೂರು ನಗರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಉಪಹಾರ ಗೃಹ

1271 (1820): ದಯಾನಂದ ರಾವ್ (ಗಾಂಧಿನಗರ):

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದಲ್ಲಿ ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ನಡೆಸುತ್ತಿರುವ ಹೋಟೆಲ್ ಮತ್ತು ಉಪಹಾರ ಗೃಹಗಳ ಸಂಖ್ಯೆ ಎಷ್ಟು ? ಅವುಗಳು ಯಾವ ಸ್ಥಳಗಳಲ್ಲಿವೆ;

ಆ. ಈ ಹೋಟೆಲ್‌ಗಳಲ್ಲಿ ಒಟ್ಟು ಎಷ್ಟು ಕೊಠಡಿಗಳಿವೆ;

ಇ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಬೆಂಗಳೂರು ನಗರದಲ್ಲಿ ಹೊಸದಾಗಿ ಹೋಟೆಲ್, ಉಪಹಾರ ಗೃಹವನ್ನು ತೆರೆಯುವ ಪ್ರಸ್ತಾವನೆ ಇದೆಯೇ;

ಈ. ಇದ್ದಲ್ಲಿ, ಅದರ ವಿವರಗಳನ್ನು ನೀಡುವುದು ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು):–

ಅ. ಹೋಟೆಲ್ – 1, ಉಪಹಾರ ಗೃಹ – 1, ''ಮಯೂರ ಕೆಂಪೇಗೌಡ'' ಹೋಟೆಲ್ ಮೆಜೆಸ್ಟಿಕ್ ಬಳಿ ಧನ್ವಂತರಿ ರಸ್ತೆಯಲ್ಲಿದೆ. ''ಮಯೂರ ಉಪಹಾರ ಗೃಹವು ಕಬ್ಬನ್ ಉದ್ಯಾನವನದಲ್ಲಿದೆ.''